**ದಿನಾಂಕಃ 23-07-2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು 3 ನೇ ಎದುರುದಾರರ ಪರ ಶ್ರೀ ಕೆ ಎಂ ಬಿ ವಕೀಲರಿಂದ**

ಅಪಘಾತದ ದಿನ ನಾನು ತಾಲೂಕು ಕಛೇರಿ ಮುಂಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದೆ. ನಾನು ಬರುತ್ತಿದ್ದೆ ವಾಹನ ಎದುರುಗಡೆಯಿಂದ ಬಂದು ಡಿಕ್ಕಿ ಪಡಿಸಿರುತ್ತದೆ. ನಾನು ರಸ್ತೆ ದಾಟುವಾಗ ಅಜಾಗರೂಕತೆಯಿಂದ ದಾಟಿ ನನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಬುಲೆರೋ ವಾಹನದ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಹಿರಿಯೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿಂದ ಶಿವಣ್ಣ ಆಸ್ಪತ್ರೆಯಲ್ಲಿ ತೋರಿಸುತ್ತಿದ್ದೇನೆ. ನನಗೆ ಯಾವುದೇ ಶಸ್ತ ಚಿಕಿತ್ಸೆ ಆಗಿಲ್ಲ. ನಾನು ಯಾವುದೇ ಊರುಗೋಲಿನ ಸಹಾಯವಿಲ್ಲದೆ ನಡೆಯುತ್ತೇನೆ ಎಂದರೆ ಸಾಕ್ಷಿ ಮುಂದುವರೆದು ಸ್ವಲ್ಪ ಸ್ವಲ್ಪ ನಡೆಯುತ್ತೇನೆ ಎಂದು ನುಡಿಯುತ್ತಾರೆ. ಈ ದಿನ ನ್ಯಾಯಾಲಯಕ್ಕೆ ಯಾವುದೇ ಊರುಗೋಲಿನ ಸಹಾಯವಿಲ್ಲದೆ ಬಂದಿದ್ದೇನೆ ಎಂದರೆ ಸರಿ .

ಹಿರಿಯೂರು ಸರ್ಕಾರಿ ಆಸ್ಪತ್ರೆಯಿಂದ ಬಿಡುಗಡೆ ಹೊಂದುವಾಗ ಸೊಂಟಕ್ಕೆ ಬೆಲ್ಟ್ ಹಾಕಿ ಕಳುಹಿಸಿರುತ್ತಾರೆ ಎಂದರೆ ನಿಜ. ಶಿವಣ್ಣ ರೆಡ್ಡಿಯವರ ಬಳಿ ಮುಂದುವರೆದ ಚಿಕಿತ್ಸೆ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸೆಗೆ ರೂ.25 ಸಾವಿರ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡಾ ಶಿವಣ್ಣ ರೆಡ್ಡಿಯವರ ಜೊತೆ ಶರೀಕಾಗಿ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪಿಜಿಯೋಥೆರಪಿ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಇಬ್ಬರು ಮಕ್ಕಳು ಅವರಿಬ್ಬರ ಮದುವೆಯಾಗಿದೆ. ಮಗ ನನ್ನ ಜೊತೆಯಲ್ಲಿ ಇದ್ದಾನೆ. ಮಗಳಿಗೆ ಮದುವೆ ಮಾಡಿಕೊಟ್ಟಿದ್ದೇವೆ. ನನ್ನ ಮಗ ಮತ್ತು ನಾನು ಸೇರಿ ತರಕಾರಿ ವ್ಯಾಪಾರ

ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ನಾನೊಬ್ಬಳೇ ವ್ಯಾಪಾರ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ತರಕಾರಿ ವ್ಯಾಪಾರದಿಂದ ರೂ,15 ರಿಂದ 20 ಸಾವಿರ ಮತ್ತು ಕುರಿ ವ್ಯಾಪಾರದಿಂದ ತಿಂಗಳಿಗೆ ರೂ.25 ಸಾವಿರ ದುಡಿಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತರಕಾರಿ ವ್ಯಾಪಾರ ಮಾಡಿದ ಬಗ್ಗೆ ಅಥವಾ ಕುರಿ ವ್ಯಾಪಾರ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ . ನಾನು ಅಪಘಾತದ ಪೂರ್ವ ಯಾವುದೇ ಕೆಲಸ ಮಾಡುತ್ತಿರಲಿಲ್ಲ ನಾನು ಪರಿಹಾರ ಬರಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1 ಮತ್ತು 2 ನೇ ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು